# ಬೆಣ್ಣೆಯಂತಹ ಬೆಮ್ಮರಲ ಹಣ್ಣು



ಬೆಮ್ಮರಲ ಹಣ್ಣು, ಮುಳ್ಳು ಹಣ್ಣು, ಬೆಣ್ಣೆ ಹಣ್ಣು ಎಂದೆಲ್ಲಾ ಕರೆಸಿಕೊಳ್ಳುವ ಈ ಹಣ್ಣು ಮಲೆನಾಡಿನ ಕಾಡು, ಬೆಟ್ಟ ಗುಡ್ಡಗಳಲ್ಲಿ ನೈಸರ್ಗಿಕವಾಗಿ ಬೆಳೆಯುವಂಥದ್ದು. ಬಿಳಿಯೂ ಅಲ್ಲದ, ಹಳದಿಯೂ ಅಲ್ಲದ, ಈ ಹಣ್ಣಿನ ಆಕಾರವೂ ಚಿಕ್ಕ ಚಿಕ್ಕದಾಗಿರುತ್ತದೆ. ಕಾಯಿಯಿರುವಾಗ ಹಸುರಾಗಿರುವ ಇವು ಹಣ್ಣಾದಾಗ ಮುತ್ತಿನಂತೆ ಹೊಳೆಯುತ್ತವೆ. ಹಣ್ಣುಗಳನ್ನು ಬಾಯೊಳಗೆ ಹಾಕಿಕೊಂಡರೆ, ಹಣ್ಣಿನ ತಿರುಳು ಬೆಣ್ಣೆಯಂತೆ ಕರಗುತ್ತದೆ. ಹಣ್ಣಿನ ಗಾತ್ರದಲ್ಲಿ ಅರ್ಧಕ್ಕಿಂತ ಹೆಚ್ಚು ಬೀಜವೇ ಇರುತ್ತದೆ. ಬೀಜದ ಒಳಭಾಗದ ತಿರುಳು ಸಹ ತಿನ್ನಲು ಯೋಗ್ಯ.

ಇದು ಮರವಲ್ಲ, ಕೈಗೆಟುಕುವಷ್ಟು ದೊಡ್ಡ ಗಾತ್ರದ ಗಿಡ. ಆದರೆ ಗಿಡದ ತುಂಬಾ ಮುಳ್ಳುಗಳಿರುವುದರಿಂದ ಹಣ್ಣು ಕೀಳುವಾಗ ಮೈ ಕೈ, ಪರಚಿಕೊಳ್ಳುವುದು ಸಹಜ. ಚಿಕ್ಕ ಪುಟ್ಟ ಪಕ್ಷಿಗಳಿಗೆ ಈ ಹಣ್ಣು ಬಲುಪ್ರಿಯ. ಹಾಗೆಯೇ ಈ ದಿನಗಳಲ್ಲಿ ಪಕ್ಷಿಗಳಿಗೆ ಆಹಾರವಾಗಿ ಹೇರಳವಾಗಿ ಸಿಗುತ್ತದೆ. ನೈಸರ್ಗಿಕವಾಗಿ ಬೆಳೆಯುವ ಈ ಕಾಡು ಹಣ್ಣುಗಳಲ್ಲಿ ದೇಹಕ್ಕೆ ಬೇಕಾದ ಪೋಷಕಾಂಶಗಳು ಅಧಿಕವಾಗಿವೆ.

–ಜಯಂತಿ ರಾಘವೇಂದ್ರ, ಆಗುಂಬೆ



# ಅಪ್ಸರೆಯರು ಮಿಂದೆದ್ದ ಕೊಳ

ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕಾಸರಗೋಡಿನಲ್ಲಿರುವ ಈ ಸುಂದರ ಕೊಳ, ಹೊನ್ನಾವರದಿಂದ ಕೇವಲ 7 ಕಿ.ಮೀ. ದೂರದಲ್ಲಿದೆ. ದಂತಕಥೆಯೊಂದರ ಪ್ರಕಾರ ಅಪ್ಸರೆಯರು ಈ ಕೊಳದಲ್ಲಿ ಜಲಕ್ರೀಡೆ ಆಡುತ್ತಿದ್ದರಂತೆ. ಈ ಕೊಳದ ಸುತ್ತಲೂ ಅನೇಕ ಗುಪ್ತ ಗುಹೆಗಳಿದ್ದು, ಪಾಂಡವರು ವನವಾಸದಲ್ಲಿದ್ದಾಗ ಈ ಗುಹೆಗಳಲ್ಲಿಯೇ ತಂಗಿದ್ದರೆಂಬುದು ಐತಿಹ್ಯ. ನೀರು 10 ಮೀಟರ್ ಎತ್ತರದಿಂದ ಧುಮುಕುತ್ತದೆ. ಹಚ್ಚ ಹಸುರು ಕಾಡಿನಿಂದ ತುಂಬಿದ ವಾತಾವರಣವು ಈ ಕೊಳದ ಸೊಬಗನ್ನು ಇನ್ನಷ್ಟು ಹೆಚ್ಚಿಸಿದೆ. ಮಳೆಗಾಲವು ಈ ಜಲಪಾತವನ್ನು ವೀಕ್ಷಿಸಲು ಸೂಕ್ತವಾದ ಸಮಯ. ಅಪ್ಸರೆಯರು ಸ್ನಾನ ಮಾಡಿದಂತಹ ಈ ಜಲಪಾತದ ಕೆಳಗೆ ನಿಂತಾಗ ಒಂದು ರೀತಿಯ ಹೆಮ್ಮೆಯ ಭಾವ ಮೂಡುವುದಂತೂ ನಿಜ.

–ಸಂಜ್ಞಾ ಭಟ್, ಶಿರಸಿ

# ಇರುವೆ ಭಾರ ಇರುವೆಗೆ....

ಶ್ರಮಕ್ಕೆ ಇನ್ನೊಂದು ಹೆಸರು 'ಇರುವೆ'. ಶ್ರಮ ಪಡದಿದ್ದರೆ, ನೀ ಇದ್ದಲ್ಲೇ ಇರುವೆ... ಎಂಬ ಮಾತನ್ನು ಎಲ್ಲರೂ ಕೇಳಿಯೇ ಇರುತ್ತೀರಿ. ಇಲ್ಲಿ ಇರುವೆಯ ವಿಷಯ ಬರುವುದಕ್ಕೆ ಕಾರಣ, ಈ ಚಿತ್ರ. ಮನೆಯ ಕಾಂಪೌಂಡಿನಲ್ಲಿ 'ಸುಧಾ' ಓದುತ್ತಿರುವಾಗ, ಪಕ್ಕದ ಮನೆಯ ಗೋಡೆಯ ಮೇಲೆ ಏನೋ ಸರಿದಾಡುತ್ತಿದ್ದಂತೆ ಭಾಸವಾಯಿತು.

ಸತ್ತ ದೊಡ್ಡ ಇರುವೆಯೊಂದನ್ನು (ಕಾರ್ಪೆಂಟರ್ ಇರುವೆ) ಸಣ್ಣ ಸಣ್ಣದಾದ ಎಂಟು ಕಪ್ಪು ಇರುವೆಗಳು ತಮ್ಮ ಮೊನಚಾದ ದಂತಗಳಿಂದ ಭದ್ರವಾಗಿ ಕಚ್ಚಿ 15 ಅಡಿ ಎತ್ತರದ ಗೋಡೆಗೆ ತಾಗಿಸಿಕೊಂಡು ಸಮತೋಲನದಲ್ಲಿ ಮೇಲ್ಮುಖವಾಗಿ ಎಳೆದುಕೊಂಡು ಹೊಗುತ್ತಿದ್ದದ್ದು ಕಂಡು ಅಚ್ಚರಿ ಆಯ್ತು. ಈ ದೃಶ್ಯ ಕಂಡಾಗ, ಬಾಲ್ಯದಲ್ಲಿ ಓದಿದ 'ಲಿಲಿಪುಟ್ ಮತ್ತು ಗಲಿವರ್' ಕಥೆ ನೆನಪಾಯ್ತು. ಇರುವೆಗಳಲ್ಲಿ 250ಕ್ಕೂ ಹೆಚ್ಚಿನ ಪ್ರಭೇದಗಳಿವೆ. ಈ ಪೈಕಿ ಕರಿ ಇರುವೆ, ಕೆಂಪು ಇರುವೆ ಅಥವಾ ಚಿಗುಳಿ, ಕೆಂಜಿಗ, ದೊಡ್ಡ ಇರುವೆ, ಗೊದ್ದ ಮೊದಲಾದವು.

ಮನೆಯಲ್ಲಿ ಯಾವ ಇರುವೆಗಳು ಕಂಡರೆ ಏನೆಲ್ಲಾ ಶುಭ ಅಶುಭ ಸಂಭವಿಸುತ್ತದೆ ಎಂಬುದು ಶಕುನ ಶಾಸ್ತ್ರದಲ್ಲಿದೆ. ಸತ್ತ ಇರುವೆಯನ್ನು ಇತರ ಇರುವೆಗಳು ತಮ್ಮ ಗೂಡಿಗೆ ಹೊಯ್ದು, ಶವಸಂಸ್ಕಾರ ಮಾಡುತ್ತವೆ ಎಂದು ಅಜ್ಜಿ ಹೇಳಿದ್ದು ನೆನಪಾಯಿತು. ಈ ಇರುವೆಗಳೂ ಅದೇ ರೀತಿ ಶವಸಂಸ್ಕಾರ ಮಾಡಬಹುದೇನೋ ಗೊತ್ತಿಲ್ಲ. ಕೊನೆಗೆ ಅನಿಸಿದ್ದು, ಆನೆ ಭಾರ ಆನೆಗೆ... ಇರುವೆ ಭಾರ ಇರುವೆಗೆ... ಏನಂತೀರಿ?

–ರಘುನಾಥ ರಾವ್ ತಾಪ್ಸೆ, ದಾವಣಗೆರೆ

